**O.S. 242-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ G N B, ವಕೀಲರಿಂದಃ**

2. ನಾನು ಹಾಜರಪಡಿಸಿದ ದಾಖಲೆಗಳು ನಮ್ಮ ತಂದೆ ಹೆಸರಿನಲ್ಲಿವೆ. ನಂತರ ನಮ್ಮ ತಮ್ಮನ ಹೆಸರಿನಲ್ಲಿ ಆಗಿವೆ. ಸ ನಂಃ 561 ಮೃತ ವೀರಪ್ಪ ಚನ್ನಪ್ಪ ಕೊಡ್ಲಿರವರ ಹೆಸರಿನಲ್ಲಿದೆ. ಸ ನಂಃ 562/1, ಇದು 3 ನೇ ಪ್ರತಿವಾದಿ ಹೆಸರಿನಲ್ಲಿದೆ. ಮನೆ ಚನ್ನಪ್ಪ ವೀರಪ್ಪ ಕೊಡ್ಲಿ ನಮ್ಮ ತಂದೆ ಹೆಸರಿನಲ್ಲಿದೆ ಅಂದರೆ ಸರಿ. 2 ನೇ ಪ್ರತಿವಾದಿ ನಮ್ಮ ತಮ್ಮ ವೀರಪ್ಪ ನ ಹೆಂಡತಿ. 2 ನೇ ಪ್ರತಿವಾದಿಗೆ ಮಕ್ಕಳಿಲ್ಲ. ವೀರಪ್ಪ ಮರಣ ಹೊಂದಿದ ನಂತರ ಆತನ ಹೆಂಡತಿ ವಾರಸುದಾರಳು ಅಂದರೆ ಸರಿ. ಮೃತ ವೀರಪ್ಪ ಹಾಗೂ ಮಂಜುನಾಥ ವಾಟ್ನಿ ಮಾಡಿಕೊಂಡಿದ್ದಾರೆ ಅಂದರೆ ಸರಿ. ಅವರಿಬ್ಬರ ವಾಟ್ನಿಗೆ ನಾವು ತಕರಾರು ಮಾಡಿಲ್ಲ. 2 ನೇ ಪ್ರತಿವಾದಿ 2 ನೇ ಮದುವೆಯಾದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. 2 ನೇ ಪ್ರತಿವಾದಿ 2 ನೇ ಮದುವೆಯಾಗಿಲ್ಲ, ಆ ಕಾರಣದಿಂದ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಿಃ 08.11.2024 ರಂದು ಮಂಜುನಾಥ ಲಕ್ಕಪ್ಪನವರ ಊರ್ಫಃ ಹಿತ್ತಲಮನಿ ರವರ ಜೊತೆಗೆ ಮದುವೆಯಾಗಿಲ್ಲ ಅಂದರೆ ಸರಿಯಲ್ಲ. ನನ್ನ ತಮ್ಮ ವೀರಪ್ಪ ಮರಣ ಹೊಂದಿದ ನಂತರ 2 ನೇ ಪ್ರತಿವಾದಿ ತವರು ಮನೆಗೆ ಹೋದಳು ಅಂದರೆ ಸರಿ. ಮೃತ ವೀರಪ್ಪನ ಹೆಂಡತಿ 2 ನೇ ಪ್ರತಿವಾದಿ ಇರುವುದರಿಂದ ಅವರೆ ವಾರಸುದಾರರಾಗುತ್ತಾರೆ ಹಾಗೂ ಆತನ ಆಸ್ತಿಗೆ 2 ನೇ ಪ್ರತಿವಾದಿ ಹಕ್ಕುದಾರಳು ಅಂದರೆ, 2 ನೇ ಮದುವೆಯಾಗಿದ್ದಾಳೆಂದು ಹೇಳುತ್ತಾರೆ. 2 ನೇ ಮದುವೆಯಾಗಿದ್ದಾಳೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಒಂದು ಮಗು ಇದೆ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.